


ಹಣವನ್ನು ರಿಕ್ಷಾದವನ ಕೈಯಲ್ಲಿ ತುರುಕಿ ಎರಡು ನಿಮಿಷದಲ್ಲಿ ಸ್ಟೇಶನ್ನಿನ ಮೆಟ್ಟಿಲುಗಳನೇರಿ ಪ್ಲಾಟ್‌ಫಾರ್ಮ್ ನಡುವೆ ಓಡಿ ಬರುವಷ್ಟರಲ್ಲಿ 7:29 ರ ಛತ್ರಪತಿ ಶಿವಾಜಿ ಟರ್ಮಿನಸ್‌ಗೆ ಹೋಗುವ ಲೋಕಲ್ ಟ್ರೇನು ಬಂದೇ ಬಿಡುತ್ತದೆ. ಕಾಲಿಡಲು ಜಾಗವಿಲ್ಲದ ಒಂದೊಂದು ಬೋಗಿಯಲ್ಲೂ ಮತ್ತೆ ಮೂವತ್ತು ನಾಲ್ವತ್ತು ಜನರನ್ನು ತುರುಕಿಸಿಕೊಂಡು ಮುಂದಿನ ಸ್ಟೇಶನ್ನಿಗೆ ಹೊರಡುತ್ತದೆ. ಹೀಗೆ ಹತ್ತಿಪ್ಪತ್ತು ಸ್ಟೇಶನ್ನುಗಳಲ್ಲಿ ಹತ್ತಿಸಿಕೊಳ್ಳುತ್ತಾ ತುಂಬು ಗರ್ಭಿಣಿಯಾಗುವ ಟ್ರೇನು ಛತ್ರಪತಿ ಶಿವಾಜಿ ಟರ್ಮಿನಸ್‌ನಲ್ಲಿ ಎಲ್ಲರನ್ನೂ ಹಡೆದು ಹಗುರಾದೆ ಎಂದುಕೊಳ್ಳುತ್ತಿರುವಾಗಲೇ ಉಲ್ಟಾ ದಿಕ್ಕಿಗೆ ಪ್ರಯಾಣಿಸುವ ಜನರು ಒಳ ಸೇರಿ ಮತ್ತೆ ಬಸಿರುಗಟ್ಟಲು ಶುರುವಾಗುತ್ತದೆ.

## ಅಡ್ಜಸ್ಟ್ ಕರಕೆ ಚಲೋ

ಸುಮಾರು ನೂರೈವತ್ತು ವರ್ಷಗಳ ಇತಿಹಾಸವಿರುವ, ಮುಂಬೈನ ಲೈಫ್ ಲೈನ್